ಮುಕ್ಕಾಲು ಲೀಟರ್ ನೀರು ಕುಡಿಯಬೇಕಾಗಿತ್ತು. ಮೊದಮೊದಲು ಅದರ ಪ್ರಭಾವ ನನಗೆ ತಿಳಿಯಲಿಲ್ಲ. ಚಿಕಿತ್ಸೆ ಮುಂದುವರೆದಂತೆ ಮೂತ್ರ ವಿಸರ್ಜನೆ ತಡೆದುಕೊಳ್ಳುವುದು ಕಠಿಣವಾಗುತ್ತಿತ್ತು. ಕೊನೆಗೊಮ್ಮೆ ನನ್ನ ತೊಂದರೆಯನ್ನು ರೇಡಿಯಾಲಜಿಸ್ಟ್‌ಗೆ ತಿಳಿಸಿದೆ. ‘ನೀವು ಮೊದಲೇ ಹೇಳಬಾರದಾ? ಈ ಚಿಕಿತ್ಸೆಯಿಂದ ನಿಮ್ಮ ಸ್ನಾಯುಗಳು ದುರ್ಬಲವಾಗುವುದರಿಂದ ನಿಮಗೆ ತೊಂದರೆಯಾಗುತ್ತಿದೆ. ನೀವು ಈ ಮೊದಲೇ ತಿಳಿಸಬಹುದಿತ್ತು’ ಎಂದರು. ನಂತರ ನೀರು ಕುಡಿದ ಅರ್ಧ ಗಂಟೆಗೆಲ್ಲಾ ನನಗೆ ಚಿಕಿತ್ಸೆ ನೀಡುತ್ತಿದ್ದರು. ಅಂದಹಾಗೆ, ಚಿಕಿತ್ಸೆಯ ಸಮಯದಲ್ಲಿ ಈ ರೀತಿಯ ಯಾವುದೇ ಇತರ ತೊಂದರೆಗಳು ಕಂಡುಬಂದರೂ, ಅದನ್ನು ತಡಮಾಡದೆ ವೈದ್ಯರಿಗೆ ತಿಳಿಸಿದರೆ, ಅವರು ಅದಕ್ಕೆ ಪರಿಹಾರ ನೀಡುತ್ತಾರೆ.

ವಿಕಿರಣ ಚಿಕಿತ್ಸಾ ಸಮಯದಲ್ಲಿ ನನ್ನ ಮನಸ್ಸಿಗೆ ತಟ್ಟಿದ ಸಂಗತಿಯೆಂದರೆ ಚಿಕ್ಕಪುಟ್ಟ ಮಕ್ಕಳು ಸಹ ಕ್ಯಾನ್ಸರ್ ಪೀಡಿತರಾಗಿ ವಿಕಿರಣ ಚಿಕಿತ್ಸೆಗೆ ಬರುತ್ತಿದ್ದುದು. ಹೌದು, ಕ್ಯಾನ್ಸರ್‌ಗೆ ವಯೋಮಾನದ ಭೇದವಿಲ್ಲ. ವಿವಿಧ ಬಗೆಯ ಕ್ಯಾನ್ಸರ್ ರೋಗಿಗಳು, ಮೊದಲೇ ಶಸ್ತ್ರಚಿಕಿತ್ಸೆಗೆ ಒಳಗಾದವರು ಅನೇಕರಿರುತ್ತಿದ್ದರು. ಸಾಮಾನ್ಯವಾಗಿ ರೋಗಿಗಳಾಗಲೀ ಅಥವಾ ಅವರ ಜೊತೆಗಿರುವವರಾಗಲೀ ಪರಸ್ಪರ ಮಾತುಕತೆ ನಡೆಸುವುದನ್ನು ಕಂಡಿದ್ದೇನೆ. ಆದರೆ, ವಿಕಿರಣ ಚಿಕಿತ್ಸೆಗೆ ಬಂದವರಲ್ಲಿ ಪರಸ್ಪರ ಮಾತುಕತೆ ಇರಲೇ ಇಲ್ಲ. ಎಲ್ಲರೂ ತಂತಮ್ಮ ಸಮಸ್ಯೆಯಲ್ಲಿ ಮುಳುಗಿರುತ್ತಿದ್ದರು.

ಶಸ್ತ್ರಚಿಕಿತ್ಸೆಗೆ ಮೊದಲೇ ಎರಡು ಬಾರಿ ಕಿಮೋಥೆರಪಿ ಚಿಕಿತ್ಸೆಯೂ ಆಯಿತು. ಕಿಮೋಥೆರಪಿ ಎಂದರೆ ಕ್ಯಾನ್ಸರ್ ಮೇಲೆ ಹೂಡುವ ರಾಸಾಯನಿಕ ಯುದ್ಧ. ಈ ಚಿಕಿತ್ಸೆಯಲ್ಲಿ ಅಡ್ಡ ಪರಿಣಾಮಗಳೂ ಹೆಚ್ಚು. ಕಾಲಿನಲ್ಲಿ, ಕೈಬೆರಳುಗಳಲ್ಲಿ ‘ಟಿಂಗ್‌ಲಿಂಗ್’ ಎಂದು ಹೇಳುವ ಜುಂ ಜುಂ ಎನ್ನುವ ಅನುಭವ. ಅದನ್ನು ನಿಯಂತ್ರಿಸಲು ಬಿಸಿನೀರು ಕುಡಿಯುವುದು (ಮೂರ್ನಾಲ್ಕು ದಿನಗಳಂತೂ ತಣ್ಣೀರು ಮುಟ್ಟಲೂ ಆಗುತ್ತಿರಲಿಲ್ಲ), ಬೆಚ್ಚಗಿನ ಆಲಿವ್ ಎಣ್ಣೆ ಮಸಾಜ್‌ಗಳು ಸ್ವಲ್ಪ ಮಟ್ಟಿಗೆ ಸಹಕಾರಿಯಾಗುತ್ತಿದ್ದವು. ವೈದ್ಯರು ನನಗೆ ಕಿಮೋಥೆರಪಿಗೆಂದು ಕೆನೋಲಾ ಹಾಕುತ್ತಿದ್ದರು (ಡ್ರಿಪ್ಸ್ ಹಾಕುವಾಗ ಅಳವಡಿಸುವ ಸಾಧನ). ಅದರಿಂದ ನನ್ನ ಕೈಗಳು ನಡುಗುತ್ತಿದ್ದವು. ಆಗ ನಾನು ಯೋಚಿಸಿದ ಪರಿಹಾರ, ಕೆನೋಲಾಗೆ ತೊಂದರೆಯಾಗದಂತೆ ಕೈಸುತ್ತ ಮಫ್ಲರ್ ಸುತ್ತಿಕೊಳ್ಳುವುದು. ಇದೆಷ್ಟೋ ಸಹಕಾರಿಯಾಗುತ್ತಿತ್ತು.

ನನಗೆ ಕ್ಯಾನ್ಸರ್ ಎಂದು ತಿಳಿದ ಕೂಡಲೇ ನನ್ನ ತಮ್ಮ ನಾಗರಾಜ ನಮ್ಮ ಒಪ್ಪಿಗೆ ಪಡೆದು ಆಯುರ್ವೇದ ಔಷಧಿ ತಂದು ಕೊಟ್ಟ. ಅದು ಕೂಡ ನನಗೆ ಬಹಳ ಸಹಕಾರಿಯಾಯಿತು. ಆಯುರ್ವೇದದ ಪ್ರಭಾವ, ವಿಕಿರಣ ಚಿಕಿತ್ಸೆ, ಮತ್ತು ಎರಡು ಕಿಮೋಥೆರಪಿಗಳ ಪ್ರಭಾವವಿರಬಹುದು, ಒಟ್ಟಿನಲ್ಲಿ ನನಗೆ ಶಸ್ತ್ರಚಿಕಿತ್ಸೆಗೆ ಮೊದಲೇ ಕ್ಯಾನ್ಸರ್ ಗಡ್ಡೆ ಕರಗಿದೆ ಎಂದು ಮತ್ತೊಂದು ಪೆಟ್ ಸ್ಕ್ಯಾನ್ ಮೂಲಕ ತಿಳಿಯಿತು. ಆಗಂತೂ ನನ್ನ ಮನಸ್ಸಿನಲ್ಲಿ ‘ಸದ್ಯ, ಶಸ್ತ್ರಚಿಕಿತ್ಸೆ ತಪ್ಪಿತು’ ಎಂಬ ನಿರಾಳ ಭಾವ ಮೂಡಿತ್ತು. ಆದರೆ, ಗಡ್ಡೆಯಿದ್ದ ಜಾಗ ಬಹಳ ನಾಜೂಕಾಗಿದ್ದು, ಮತ್ತೆ ಕ್ಯಾನ್ಸರ್ ಮರುಕಳಿಸುವ ಸಂಭವ ಹೆಚ್ಚಾಗಿರುತ್ತದೆ. ಆದ್ದರಿಂದ ಶಸ್ತ್ರಚಿಕಿತ್ಸೆ ಆಗಲೇಬೇಕು ಎಂದು ವೈದ್ಯರು ಅಭಿಪ್ರಾಯಪಟ್ಟರು. ನಂತರ ಶಸ್ತ್ರಚಿಕಿತ್ಸೆಯಾಯಿತು. ನುರಿತ ವೈದ್ಯರಾದ ಡಾ. ಜವೇರಿಯವರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಷ್ಟೇ ಅಲ್ಲ, ನಂತರವೂ ಅತ್ಯಂತ ಕಾಳಜಿಯಿಂದ ನನ್ನ ತಪಾಸಣೆ ಮಾಡುತ್ತಿದ್ದರು.

ದೊಡ್ಡ ಕರುಳಿನ ಕ್ಯಾನ್ಸರ್‌ನಲ್ಲಿ ಗಡ್ಡೆ ಗುದದ್ವಾರದಲ್ಲಿ ಅಥವಾ ಅದಕ್ಕೆ ತೀರಾ ಅಂಟಿಕೊಂಡಂತೆ ಇದ್ದರೆ ಶಸ್ತ್ರಚಿಕಿತ್ಸೆಯಲ್ಲಿ ಅದನ್ನು ಮುಚ್ಚಿ ‘ಕೊಲೊಸ್ಟೋಮಾ’ ಎಂಬ ಕಾಯಂ ಮಲವಿಸರ್ಜನಾ ಚೀಲವನ್ನು ದೊಡ್ಡ ಕರುಳಿಗೇ ಅಳವಡಿಸುತ್ತಾರೆ. ಪುಣ್ಯವಶಾತ್ ನನಗೆ ಅದರ ಅವಶ್ಯಕತೆಯಿಲ್ಲದೆ ‘ಇಲಿಯೋಸ್ಟೋಮಾ’ ಎಂಬ ಚೀಲವನ್ನು ಸಣ್ಣ ಕರುಳಿಗೆ ಅಳವಡಿಸಿದ್ದರು. ಅದನ್ನು ಎರಡು ತಿಂಗಳ ನಂತರ ಮತ್ತೊಂದು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಲಾಯಿತು. ಆಗಲೇ ನನ್ನ ಮನಸ್ಸು ಸಂಪೂರ್ಣ ನಿರಾಳವಾಯಿತು. ಈ ಮಧ್ಯೆ ಮತ್ತೆ ಆರು ಬಾರಿ ಕಿಮೋಥೆರಪಿ ಚಿಕಿತ್ಸೆಗೆ ಒಳಗಾದೆ.

ಕಿಮೋಥೆರಪಿ ಅನೇಕ ಅಡ್ಡ ಪರಿಣಾಮಗಳನ್ನು ಉಂಟುಮಾಡುತ್ತದೆ. ಸಾಮಾನ್ಯವಾಗಿ ಅದರಿಂದ ಒಂದೆರಡು ದಿನಗಳಲ್ಲೇ ತಲೆಯ ಮೇಲಿನ ಕೂದಲೆಲ್ಲಾ ಉದುರಿ ತಲೆ ಬೋಳಾಗುತ್ತದೆ. ಆದರೆ ನನಗೆ ನೀಡಿದ ಕಿಮೋಥೆರಪಿ ಔಷಧಿಯಿಂದ ತಲೆ ಕೂದಲು ಉದುರುವುದಿಲ್ಲವೆಂದು ಮೊದಲೇ ವೈದ್ಯರು ಹೇಳಿದ್ದರು. ಆದರೆ ‘ನ್ಯೂರೋಪತಿ’ ಎಂಬ ಅಡ್ಡ ಪರಿಣಾಮ ಇಂದಿಗೂ ನನ್ನನ್ನು ಕಾಡುತ್ತಿದೆ. ನ್ಯೂರೋಪತಿ ಎಂದರೆ, ಪಾದಗಳು ಮತ್ತು ಕೈಗಳಲ್ಲಿನ ನರಗಳ ತುದಿಗಳು ಬಹುಮಟ್ಟಿಗೆ ನಾಶವಾಗಿ ಅಂಗೈ ಮತ್ತು ಅಂಗಾಲುಗಳು ಮರಗಟ್ಟುವುದು, ಇಲ್ಲವೇ ಚಳುಕು ಹೊಡೆಯುವುದು ಇತ್ಯಾದಿ. ಸುಟ್ಟಗಾಯಗಳು, ಅಥವಾ ಇತರ ಯಾವುದೇ ರೀತಿಯ ಗಾಯಗಳಾದರೂ ತಿಳಿಯುವುದಿಲ್ಲ. ಪುಣ್ಯವಶಾತ್, ಅಷ್ಟರಮಟ್ಟಿನ ತೀವ್ರ ಪರಿಣಾಮವಾಗದೆ, ಅಂಗೈಗಳು ಸಾಮಾನ್ಯವಾಗಿದ್ದು, ಪಾದಗಳಲ್ಲಿ ಸಂವೇದನಾಶಕ್ತಿ ಬಹುಮಟ್ಟಿಗೆ ಉಳಿದುಕೊಂಡಿರುವುದು ನನ್ನ ಅದೃಷ್ಟವೇ ಸರಿ. ಆದರೂ ಪಾದಗಳು, ವಾತಾವರಣದ ಉಷ್ಣತೆಗೆ ಬಹಳ ತೀವ್ರವಾಗಿ ಸ್ಪಂದಿಸುತ್ತವೆ. 365 ದಿನಗಳೂ ಕಾಲುಚೀಲ ಧರಿಸಿ ಓಡಾಡುವ ತೊಂದರೆ ಇದ್ದೇ ಇದೆ.

ಇಲಿಯೋಸ್ಟೋಮಾ ತೆಗೆಯಲು ಮತ್ತೊಂದು ಸುದೀರ್ಘ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. 2016ರ ಸೆಪ್ಟೆಂಬರ್ ಕೊನೆಯಲ್ಲಿ ಆರಂಭವಾದ ನನ್ನ ಚಿಕಿತ್ಸೆ ಅಂತೂ 2017ರ ಆಗಸ್ಟ್ ವೇಳೆಗೆ ಮುಗಿಯಿತು. ಈ ಸಂದರ್ಭದಲ್ಲಿ ನಾನು ಕಲಿತ ಪಾಠ ಎಂದರೆ, ಯಾವುದೇ ಸಂದರ್ಭದಲ್ಲೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಇರುವುದು. ಇದರಿಂದ ಚಿಕಿತ್ಸೆಯ ಬಗ್ಗೆ, ವೈದ್ಯರ ಬಗ್ಗೆ ಅಪರಿಮಿತವಾದ ನಂಬಿಕೆ ಹುಟ್ಟುತ್ತದೆ.

***

ಎಷ್ಟೋ ವೇಳೆ ಕ್ಯಾನ್ಸರ್ ಗಡ್ಡೆ ಹೊರನೋಟಕ್ಕೆ ಕಂಡುಬಂದರೂ ಅಥವಾ ಗಡ್ಡೆಯಿರುವ ಜಾಗವನ್ನು ಸ್ಪರ್ಶಿಸಿದಾಗ ಅದರ ಅಸ್ತಿತ್ವ ತಿಳಿದು ಬಂದರೂ, ಮೊದಮೊದಲು ಯಾವುದೇ ನೋವು ತೊಂದರೆ ಕೊಡದೆ ನಿರಪಾಯಕಾರಿ ಎಂಬಂತೆ ಮೋಸಗೊಳಿಸುವ ಸಾಧ್ಯತೆ ಇರುತ್ತದೆ. ಏನೋ ಒಂದು ಗಡ್ಡೆ ಆಗಿದೆ, ಅದರಿಂದೇನೂ ನೋವಿಲ್ಲ, ಇದಕ್ಕೆಲ್ಲಾ ವೈದ್ಯರ ಬಳಿ ತೋರಿಸುವ ಅವಶ್ಯಕತೆ ಇಲ್ಲ ಎಂದು ಅದನ್ನು ಅಲಕ್ಷಿಸಿದರೆ, ಮುಂದೆ ಅದೇ ಅಗಾಧವಾಗಿ ಬೆಳೆದು, ತನ್ನ ವಿರಾಟ ರೂಪವನ್ನು ತೋರಿಸಿಬಿಡುತ್ತದೆ. ಈ ಸಂಗತಿಯಂತೂ ಸ್ತನ ಕ್ಯಾನ್ಸರ್ ವಿಷಯದಲ್ಲಿ ನೂರಕ್ಕೆ ನೂರು ಸತ್ಯ.

ಪ್ರತಿಕ್ರಿಯಿಸಿ: feedback@sudha.co.in

## ವಿಕಿರಣ ಚಿಕಿತ್ಸೆ ಎಂದರೇನು?

ಅಧಿಕ ಶಕ್ತಿಯುಳ್ಳ ವಿಕಿರಣ, ಗಾಮಾ ವಿಕಿರಣ ಹಾಗೂ ಪ್ರೋಟಾನ್‌ಗಳಂತಹ ಆವೇಶಿತ ಕಣ ದಂಡಗಳನ್ನು ಬಳಸಿ ಕ್ಯಾನ್ಸರ್ ಕೋಶಗಳನ್ನು ನಾಶಪಡಿಸಲು ಅಥವಾ ಕ್ಯಾನ್ಸರ್ ಗಡ್ಡೆಯನ್ನು ಸಂಕುಚಿಸಲು ಬಳಸುವ ಚಿಕಿತ್ಸೆಯೇ ‘ವಿಕಿರಣ ಚಿಕಿತ್ಸೆ’. ವಿಕಿರಣ ಚಿಕಿತ್ಸೆ ಕ್ಯಾನ್ಸರ್ ಕೋಶಗಳನ್ನು ಕೊಲ್ಲುತ್ತದೆ, ಇಲ್ಲವೇ ಅವುಗಳ ‘ಡಿಎನ್‌ಎ’ಗೆ ಹಾನಿಯುಂಟುಮಾಡಿ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹಾನಿಗೊಳಗಾದ ಕ್ಯಾನ್ಸರ್ ಕೋಶಗಳು ಬೆಳೆಯಲಾರವು ಇಲ್ಲವೇ ಅವು ಸಾಯುತ್ತವೆ. ಒಮ್ಮೆ ಸತ್ತ ಕ್ಯಾನ್ಸರ್ ಕೋಶಗಳು ಮರುಜೀವ ಪಡೆಯಲಾರವು ಎಂಬುದು ಗಮನಾರ್ಹ ಸಂಗತಿ.

## ಕಿಮೋಥೆರಪಿ

ಕ್ಯಾನ್ಸರ್ ಕೋಶಗಳ ನಾಶಕ್ಕೆ, ಅವುಗಳ ವೃದ್ಧಿಯನ್ನು ಕುಂಠಿತಗೊಳಿಸಲು ಉಪಯೋಗಿಸುವ ರಾಸಾಯನಿಕ ಚಿಕಿತ್ಸೆ. ಇದೊಂದು ರಣವೈದ್ಯ. ಇದರ ಅಡ್ಡ ಪರಿಣಾಮಗಳು: ವಾಂತಿಯಾಗುವುದು, ಊಟ ಸೇರದಿರುವುದು, ತಲೆಸುತ್ತು, ಕೂದಲುದುರಿ ತಲೆ ಬೋಳಾಗುವುದು, ಸುಸ್ತು, ಬಾಯಿ ಹುಣ್ಣು, ನ್ಯೂರೋಪತಿ ಎಂಬ ಪಾದ ಮತ್ತು ಅಂಗೈಗಳಲ್ಲಿನ ನರಕೋಶಗಳ ಇತ್ಯಾದಿ. ಎಲ್ಲ ಅಡ್ಡ ಪರಿಣಾಮಗಳೂ ಎಲ್ಲ ರೋಗಿಗಳಿಗೂ ಉಂಟಾಗುವುದಿಲ್ಲ. ಉದಾಹರಣೆಗೆ, ನನಗೆ ನೀಡಿದ ಕಿಮೋಥೆರಪಿಯಲ್ಲಿ ಕೂದಲು ನಾಶವಾಗಲಿಲ್ಲ. ಆದರೆ ನ್ಯೂರೋಪತಿ ಇಂದಿಗೂ ಕಾಡಿಸುತ್ತಿದೆ.